ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :—

ಅ) ೧೯೮೬-೮೭ರಲ್ಲಿ ಮಂಜೂರಾಗಿತ್ತು. ಆದರೆ ಕೆಲಸವನ್ನು ಪ್ರಾರಂಭ ಮಾಡಲಿಲ್ಲ. ಪುನಃ ೧೯೯೦-೯೧ರಲ್ಲಿ ಮಂಜೂರು ಮಾಡುತ್ತಿದೆ.

ಆ) ಗುತ್ತಿಗೆದಾರರು ಹೆಚ್ಚಿನ ದರ ನಮೂದಿಸಿದ್ದರಿಂದ ಹಾಗೂ ಹಣಕಾಸಿನ ಮುಗ್ಗಟ್ಟಿನಿಂದಾಗಿ.

ಇ) ಬಂದಿದೆ

ಈ) ಇಲ್ಲ

ವಿಷಯ : ರಾಜ್ಯ ಸಾರಿಗೆ ಸಂಸ್ಥೆಯಿಂದ ಬಸ್ಸುಗಳ ಬಾಡಿಗಳನ್ನು ಕಟ್ಟಿಸುವುದರ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೭೬ (೧೫೩೯)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸಾರಿಗೆ ಸಂಸ್ಥೆಯವರು ಕಳೆದ ಮೂರು ವರ್ಷಗಳಿಂದ ಎಷ್ಟು ಬಸ್ಸುಗಳಿಗೆ ಖಾಸಗಿಯವರಿಂದ ಬಾಡಿಗಳನ್ನು ಕಟ್ಟಿಸಿರುತ್ತಾರೆ. ಹಾಗೂ ಅವರಿಗೆ ಸಂದಾಯ ಮಾಡಿದ ಒಟ್ಟು ಮೊಬಲಗೆಷ್ಟು ? (ಯಾವ ಯಾವ ಸಂಸ್ಥೆಗೆ ಎಷ್ಟೆಷ್ಟು ಹಣವನ್ನು ನೀಡಲಾಗಿದೆ ಎಂಬುದರ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುವುದು).

ಆ) ಸದರಿ ಸಂಸ್ಥೆಯವರಿಂದ ಕಳೆದ ಮೂರು ವರ್ಷ ಟಯರುಗಳಿಗೆ ರೀಟ್ರೆಡಿಂಗ್ ಮಾಡಿಸಲಾಗಿದೆಯೇ. ?

ಇ) ಯಾವ ಯಾವ ಸಂಸ್ಥೆಯಿಂದ ಈ ಕಾರ್ಯವನ್ನು ಮಾಡಿಸಲಾಗಿದೆ ಹಾಗೂ ಎಷ್ಟು ಹಣವನ್ನು ಈ ಸಂಸ್ಥೆಗಳಿಗೆ ನೀಡಲಾಗಿರುತ್ತದೆ ? (ಪೂರ್ಣ ವಿವರಗಳನ್ನು ನೀಡುವುದು)

ಈ) ಮೇಲ್ಕಾಡ ಎರಡು ಕಾರ್ಯಗಳನ್ನು ಖಾಸಗಿಯವರಿಗೆ ನೀಡದೆ ಸಾರಿಗೆ ಸಂಸ್ಥೆಯವರಿಂದಲೇ ನಿರ್ವಹಿಸುವಂತೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :- ಅ) ಕಳೆದ ಮೂರು ವರ್ಷಗಳಿಂದ ಅಂದರೆ ೧೯೮೮-೮೯ ರಿಂದ ೩೦-೧೧-೯೦ರ ವರೆಗೆ ಬೇರೆ ಬೇರೆ ಸಂಸ್ಥೆಗಳಿಂದ ವಾಹನಗಳ ಕವಚವನ್ನು ಕಟ್ಟಿಸಿರುವ ವಿವರ. ಸಂಸ್ಥೆಗಳ ಹೆಸರು ಮತ್ತು ಇವುಗಳಿಗೆ ಸಂದಾಯ ಮಾಡಿರುವ ಹಣ ವಿವರವನ್ನು ಈ ಕೆಳಗೆ ಕೊಡಲಾಗಿದೆ.

ಕ್ರಮ ಸಂಖ್ಯೆ	ನಿರ್ಮಾಪಕರ ಹೆಸರು	ವಾಹನಗಳ ಸಂಖ್ಯೆ	ಸಂದಾಯವಾದ ಹಣ
೧	ಕಿಂಕೋ, ಬೆಂಗಳೂರು	೭೯೭	೧೪,೦೧,೬೦,೫೯೧-೦೦
		ಗ್ರಾ : ನಗರ	
೨	ಕಾಲಂ ಇಂಡಸ್ಟ್ರೀಸ್, ಬೆಂಗಳೂರು	ಗ್ರಾ-೫	೭ ೭೧,೪೫೦-೦೦
೩	ಕೇನ್ ಇಂಜಿನಿಯರಿಂಗ್ ಹುಬ್ಬಳ್ಳಿ	ಗ್ರಾ-೩	೪ ೨೪,೫೭೨-೦೦
೪	ಎಂ.ಜಿ. ಅಟೋಮೊಬೈಲ್ಸ್, ಬಳ್ಳಾರಿ	ಗ್ರಾ-೩	೪ ೦೪,೦೯೬-೦೦
೫	ಆಜಾದ್ ಕೋಚ್ ಬಿಲ್ಡರ್ಸ್ ಬೆಂಗಳೂರು	ಸೂ.ಡಿ-೬೫	೧,೫೯,೬೪೨-೦೦
೬	ಎಸ್.ಎಂ. ಕನ್ನಪ್ಪ ಆಟೋಮೊಬೈಲ್ಸ್ ಬೆಂಗಳೂರು	ಸೂ.ಡಿ-೪೧	೨,೦೦,೧೪,೪೭೯-೦೦
೭	ಬೆಂಗಳೂರು ಬಾಡಿ ಬಿಲ್ಡರ್ಸ್, ಬೆಂಗಳೂರು	ಸೂ.ಡಿ-೬೦	೧,೪೬,೨೨,೦೫೯-೦೦
೮	ಶಕ್ತಿ ಕೋಚ್ ಬಿಲ್ಡರ್ಸ್, ಬೆಂಗಳೂರು	ಸೂ.ಡಿ-೮	೨೦,೪೧೯೬೫-೦೦
೯	ಶಾಂತಿ ಮಂಗೇಶ್, ಬೆಳಗಾವಿ	ಸೂ ಡಿ-೧	೨,೪೨,೦೧೪-೦೦
೧೦	ಕೋಚ್ ಕ್ರಾಪ್ಟ್ ಬೆಂಗಳೂರು	ಸೂ ಡಿ-೨	೫,೧೪,೪೩೬-೦೦
೧೧	ಸೂರಿ ಇಂಡಸ್ಟ್ರೀಸ್, ಬೆಂಗಳೂರು	ಸೂ.ಡಿ-೧	೨,೪೨ ೦೧೪-೦೦
೧೨	ಸಿಯಾನ್ ಗ್ಯಾರೇಜ್, ಬಾಂಬೆ	ಸೂ ಡಿ ೫	೧೨,೪೪೯೩೦-೦೦
೧೩	ಅಟೋ ಕೋಚ್, ಹೈದ್ರಾಬಾದ್	ಸೂ.ಡಿ-೨	೪,೯೨,೯೫೨-೦೦
	ಒಟ್ಟು :	೧೦೫೩	೧೯ ೭೨ ೦೫ ೪೪೦-೦೦

ಗ್ರಾ – ಗ್ರಾಮಾಂತರ, ಸೂ.ಡಿ. – ಸೂಪರ್ ಡಿಲಕ್ಸ್

ಆ) ಹೌದು

ಇ) ಸಂಸ್ಥೆಯವರು ಕಳೆದ ಮೂರು ವರ್ಷಗಳಿಂದ ರೀಟ್ರೇಡ್ ಮಾಡಿದ ಟೈರುಗಳ ವಿವರವನ್ನು ಲಗತ್ತಿಸಿದ ಪಟ್ಟಿಯಲ್ಲಿ ಕೊಡಲಾಗಿದೆ. ಈ ಬಗ್ಗೆ ಸಂಸ್ಥೆಗಳಿಗೆ ಪಾವತಿ ಮಾಡಿರುವ ಹಣದ ಮೊಬಲಗಿನ ವಿವರ ಸದ್ಯದಲ್ಲಿ ಲಭ್ಯವಿರುವುದಿಲ್ಲ.

ಈ) ಟೈರುಗಳ ರೀಟ್ರೇಡ್ ಮಾಡುವ ಕೆಲಸವನ್ನು ಸಂಸ್ಥೆಯೇ ನಿರ್ವಹಿಸುತ್ತಿದೆ. ಶೇಕಡ ೯೦ರಷ್ಟು ಟೈರುಗಳ ಸಂಸ್ಕರಣೆಯ ಕೆಲಸವನ್ನು ಸಂಸ್ಥೆಯಿಂದಲೇ ಮಾಡಲಾಗುತ್ತಿದೆ.

Statement showing the details of Tyres processed by the private agencies for the last 3 years

Sl. No.	Name of the Firm	1987-88 No.of Tyres	1988 89 No.of Tyres	1989-90 No.of Tyres
1	M/s K.E.C.	2193	922	395
2	Gulistan Inds.	3539	1475	709
3	Tyre ways	2810	2425	1408
4	Vijay Inds.	3461	2166	1200
5	Venkateshwara	2913	1933	2277
6	Siddeswara	1640	–	–
7	Sakalawar Tyre	866	632	753
8	Manjunatha	9093	3920	2628
9	Jairaj	1500	1346	1127
10	Cobra Tyres	1500	1990	2062
11	Jaihind Tyres	1512	554	16
12	Popular Tyres	1456	780	13
13	United Tyres	1457	1448	420
14	Tyre Service Bellary	9202	2440	2572
15	Belgaum Tyres	1538	812	545
16	Star Tyres	1906	937	277
	Total :	46636	23780	16402

ವಿಷಯ : ಧಾರ್ಮಿಕ ದತ್ತಿ ಇಲಾಖೆಯ ದೇವಸ್ಥಾನಗಳ ದುರಸ್ತಿ

ಚುಕ್ಕೆ ಗುರ್ತಿನ ಪ್ರಶ್ನೆ ೬೭೭ (೫೬೫)

ಶ್ರೀ ಶಿವಾನಂದ ಹೆಜ್. ಕೌಜಲಗಿ (ಬೈಲಹೊಂಗಲ) :- ಮಾನ್ಯ ಕಂದಾಯ ಸಚಿವರು ಈ ಕೆಳಕೆಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ದೇವಸ್ಥಾನಗಳ ಕಟ್ಟಡ ಕಟ್ಟಲು ದುರಸ್ತಿ ಮಾಡಲು ಆಯವ್ಯಯದಲ್ಲಿ ಕಳೆದ ೩ ವರ್ಷಗಳಿಂದ ಒದಗಿಸಿದ ಮೊತ್ತ ಎಷ್ಟು (ವರ್ಷವಾರು ಜಿಲ್ಲಾವಾರು ಪ್ರತ್ಯೇಕ ವಿವರ ನೀಡುವದು)